**All India Radio: Bangalore**
**National Bulletin In Kannada**
**08.12.2025  1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.12.2025  1.10 pm**

**<>><><*><><<>**

ಮುಖ್ಯಾಂಶಗಳು

**೧. ಸ್ವಾತಂತ್ರ್ಯ ಹೋರಾಟಕ್ಕೆ ವಂದೇ ಮಾತರಂ ಗೀತೆ ಪ್ರೇರಣೆ ; ಲೋಕಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿಮತ**

**೨. ನವದೆಹಲಿಯಲ್ಲಿಂದು ಯುನೆಸ್ಕೋ ಅಂತರ ಸರ್ಕಾರಿ ಸಮಿತಿಯ ೨೦ನೇ ಅಧಿವೇಶನ ದೀಪಾವಳಿ ಹಬ್ಬವನ್ನು ಯುನೆಸ್ಕೋ ಪರಂಪರೆ ಪಟ್ಟಿಗೆ ನಾಮ ನಿರ್ದೇಶನ**

**೩. ಜಮ್ಮು-ಕಾಶ್ಮೀರದಲ್ಲಿ ಇಂದು ಮತ್ತು ನಾಳೆ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಸಾಫ್ಟ್‌ವೇರ್ ಆವೃತ್ತಿಯ ಗ್ರ್ಯಾಂಡ್ ಫಿನಾಲೆ**

**೪. ಸ್ಕ್ವಾಷ್ ವಿಶ್ವಕಪ್ ; ಭಾರತದ ಅತಿಥ್ಯದಲ್ಲಿ ಚೆನ್ನೈನಲ್ಲಿ ಇದೇ ೧೪ರವರೆಗೆ ಆಯೋಜನೆ**

**<>><><*><><<>**

ರಾಷ್ಟ್ರೀಯ ಗೀತೆ ವಂದೇ ಮಾತರಂನ ೧೫೦ನೇ ವಾರ್ಷಿಕೋತ್ಸವದ ಕುರಿತು ಇಂದು ಲೋಕಸಭೆಯಲ್ಲಿ ವಿಶೇಷ ಚರ್ಚೆ ಆರಂಭವಾಯಿತು. ಚರ್ಚೆಗೆ ಹತ್ತು ಗಂಟೆಗಳ ಸಮಯವನ್ನು ನಿಗದಿಪಡಿಸಲಾಗಿದೆ. ಲೋಕಸಭೆಯಲ್ಲಿ ಚರ್ಚೆಯನ್ನು ಪ್ರಾರಂಭಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಈ ಐತಿಹಾಸಿಕ ಚರ್ಚೆ ಮುಂದಿನ ಪೀಳಿಗೆಗಳಿಗೆ ಶಿಕ್ಷಣದ ದೃಷ್ಟಿಯಲ್ಲಿ ಪ್ರಾಮುಖ್ಯತೆ ಪಡೆಯಲಿದೆ. ವಂದೇ ಮಾತರಂ ಗೀತೆಯ ೧೫೦ ವರ್ಷಗಳ ಈ ಪಯಣ ಅನೇಕ ಸವಾಲುಗಳನ್ನು ದಾಟಿ ಬಂದಿದೆ. ವಂದೇ ಮಾತರಂ ೫೦ ವರ್ಷ ಪೂರೈಸಿದಾಗ ಭಾರತ ಗುಲಾಮಗಿರಿಯ ಸುಳಿಯಲ್ಲಿ ಸಿಲುಕಿತ್ತು. ಇನ್ನು ಈ ಗೀತೆ ೧೦೦ ವರ್ಷಗಳನ್ನು ಪೂರೈಸಿದ್ದಾಗ ಭಾರತ ತುರ್ತು ಪರಿಸ್ಥಿತಿಯನ್ನು ಎದುರಿಸಿತ್ತು ಎಂದರು.ಇದು ಪ್ರತಿ ಭಾರತೀಯನ ಸಂಕಲ್ಪವಾಗಿದ್ದು, ಇದರಿಂದ ವೇದದ ಸ್ಮರಣೆಯಾಗುತ್ತದೆ. ಸ್ವಾತಂತ್ರ್ಯ ಹೋರಾಟಕ್ಕೆ ವಂದೇ ಮಾತರಂ ಗೀತೆ ಪ್ರೇರಣೆಯಾಗಿತ್ತು ಎಂದು ಪ್ರಧಾನಿ ಹೇಳಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೨ ಸೆಕೆಂಡ್‌ಗಳು)**

**<>><><*><><<>**

ರಾಜ್ಯಸಭೆಯಲ್ಲಿಂದು ಈ ತಿಂಗಳ ೪ ರಂದು ನಿಧನರಾದ ಮಿಜೋರಾಂನ ಮಾಜಿ ರಾಜ್ಯಪಾಲ ಸ್ವರಾಜ್ ಕೌಶಲ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಇಂದು ಬೆಳಗ್ಗೆ ೧೧ ಗಂಟೆಗೆ ಸದನ ಸಭೆ ಸೇರಿದಾಗ ರಾಜ್ಯಸಭಾಪತಿ ಹಾಗೂ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ತಮ್ಮ ಸಂತಾಪ ಸೂಚಕ ಭಾಷಣದಲ್ಲಿ ಸ್ವರಾಜ್ ಕೌಶಲ್ ಅವರನ್ನು ಸ್ಮರಿಸಿದರು. ಅವರ ನಿಧನದಿಂದ ರಾಷ್ಟ್ರವು ಕರುಣಾಳು ವ್ಯಕ್ತಿ, ಶ್ರೇಷ್ಠ ನ್ಯಾಯ ಶಾಸ್ತ್ರಜ್ಞ ಮತ್ತು ಸಮರ್ಥ ಆಡಳಿತಗಾರರನ್ನು ಕಳೆದುಕೊಂಡಿದೆ ಎಂದರು. ಅಗಲಿದ ಗಣ್ಯರ ಸ್ಮರಣಾರ್ಥ ಸದನದ ಸದಸ್ಯರು ಮೌನ ಆಚರಿಸಿದರು.

**<>><><*><><<>**

ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗಾಗಿ ಅಂತರಸರ್ಕಾರಿ ಸಮಿತಿಯ ೨೦ನೇ ಅಧಿವೇಶನವು ಇಂದು ನವದೆಹಲಿಯ ಕೆಂಪು ಕೋಟೆಯಲ್ಲಿ ಪ್ರಾರಂಭವಾಗಲಿದೆ. ಈ ಅಧಿವೇಶನದ ಅಧ್ಯಕ್ಷತೆಯನ್ನು ಯುನೆಸ್ಕೋದ ಭಾರತದ ರಾಯಭಾರಿ ಮತ್ತು ಶಾಶ್ವತ ಪ್ರತಿನಿಧಿ ವಿಶಾಲ್ ವಿ. ಶರ್ಮಾ ವಹಿಸಲಿದ್ದಾರೆ. ಬೆಳಕು, ಸಹೋದರತ್ವ, ಕರುಣೆ ಮತ್ತು ಸಾಮೂಹಿಕ ಆಚರಣೆಯ ಹಬ್ಬವಾದ ದೀಪಾವಳಿಯನ್ನು ಭಾರತವು ಈ ವರ್ಷದ ಯುನೆಸ್ಕೋ ಪರಂಪರೆಯ ಪಟ್ಟಿಗೆ ಸಲ್ಲಿಸಲು ನಾಮನಿರ್ದೇಶನ ಮಾಡಿದೆ. ಸ್ವತಂತ್ರ ಮೌಲ್ಯಮಾಪನ ಸಂಸ್ಥೆಗಳು ಈ ಹಿಂದೆ ಪರಿಶೀಲಿಸಿದ ಪ್ರಸ್ತಾವನೆಯನ್ನು ಅಧಿವೇಶನದಲ್ಲಿ ಚರ್ಚಿಸಲಾಗುವುದು ಮತ್ತು ಸರ್ಕಾರವು ಸಕಾರಾತ್ಮಕ ಫಲಿತಾಂಶದ ವಿಶ್ವಾಸ ಹೊಂದಿದೆ ಎಂದು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದ್ದಾರೆ. ಆರು ದಿನಗಳ ಈ ಕಾರ್ಯಕ್ರಮವು, ಯುನೆಸ್ಕೋ ಐಸಿಎಚ್ ಪಟ್ಟಿಗಳಲ್ಲಿ ಸೇರಿಸಲು ರಾಜ್ಯ ಪಕ್ಷಗಳು ಸಲ್ಲಿಸಿದ ನಾಮನಿರ್ದೇಶನಗಳನ್ನು ಪರಿಶೀಲಿಸುವುದು, ಅಸ್ತಿತ್ವದಲ್ಲಿರುವ ಅಂಶಗಳ ಸ್ಥಿತಿಯನ್ನು ಪರಿಶೀಲಿಸುವುದು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಲು ಅಂತಾರಾಷ್ಟ್ರೀಯ ನೆರವು ನೀಡುವ ಗುರಿಯನ್ನು ಹೊಂದಿದೆ. ನಿನ್ನೆ ಈ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ನಡೆಯಿತು.

**<>><><*><><<>**

’ಅಭಿವೃದ್ಧಿಯೂ ಪರಂಪರೆಯೂ’ ಎಂಬ ಧ್ಯೇಯವಾಕ್ಯವು ಸಾಂಸ್ಕೃತಿಕ ಬೇರುಗಳನ್ನು ಅಳಿಸಿಹಾಕುವ ಬದಲು ಸಂಸ್ಕೃತಿಯನ್ನು ಬಲಪಡಿಸುವುದನ್ನು ಖಚಿತಪಡಿಸಿಕೊಳ್ಳುವ ಬದ್ಧತೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಯಾವುದೇ ಸಂಪ್ರದಾಯ, ಯಾವುದೇ ಸಾಧಕ ಮತ್ತು ಯಾವುದೇ ಸಮುದಾಯವು ತೆರೆಮರೆಯಲ್ಲಿ ಉಳಿಯದಂತೆ ಭಾರತ ಖಚಿತಪಡಿಸುತ್ತಿದೆ ಎಂದು ಅವರು ಹೇಳಿದರು. ನವದೆಹಲಿಯಲ್ಲಿ ಯುನೆಸ್ಕೋದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗಾಗಿ ಅಂತರಸರ್ಕಾರಿ ಸಮಿತಿಯ ೨೦ನೇ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತಕ್ಕೆ ಪರಂಪರೆ ಎಂದಿಗೂ ಹಳೆಯದನ್ನು

ನೆನಪಿಸುವ ವಿಷಯವಾಗಿರದೆ ಜ್ಞಾನ, ಸೃಜನಶೀಲತೆ ಮತ್ತು ಸಮುದಾಯದ ನಿರಂತರ ಹರಿವಿನ ಜೀವಂತ ನದಿಯಾಗಿದೆ ಎಂದು ಹೇಳಿದರು. ಸಮಾರಂಭವನ್ನುದ್ದೇಶಿಸಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ಭಾರತವು ಯುನೆಸ್ಕೋದ ಅನೇಕ ಪರಂಪರೆಯ ತಾಣಗಳ ನೆಲೆಯಾಗಿರುವುದಲ್ಲದೆ, ಪ್ರಪಂಚದಾದ್ಯಂತ ಪರಂಪರೆಗಳನ್ನು ಸಂರಕ್ಷಿಸಲು ಹಲವು ಯೋಜನೆಗಳನ್ನು ಕೈಗೊಂಡಿದೆ. ಸಂಪ್ರದಾಯಗಳು, ಭಾಷೆಗಳು ಮತ್ತು ಹಬ್ಬಗಳು ಸಂಸ್ಕೃತಿಯ ಅತ್ಯಂತ ಪ್ರಮುಖ ಅಂಶಗಳಾಗಿವೆ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಈ ಸಭೆಯು ಜೀವಂತ ಸಂಪ್ರದಾಯಗಳನ್ನು ರಕ್ಷಿಸುವ ದೇಶದ ಬದ್ಧತೆಯನ್ನು ಬಲಪಡಿಸುತ್ತದೆ ಎಂದು ಹೇಳಿದರು.

<><><*><><<>

ಜಮ್ಮುವಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇಂದು ಮತ್ತು ನಾಳೆ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ೨೦೨೫ - ಸಾಫ್ಟ್‌ವೇರ್ ಆವೃತ್ತಿಯ ಗ್ರ್ಯಾಂಡ್ ಫಿನಾಲೆಯನ್ನು ಆಯೋಜಿಸಲಿದೆ. ಐಐಟಿ ಜಮ್ಮು ಈ ಪ್ರತಿಷ್ಠಿತ ರಾಷ್ಟ್ರವ್ಯಾಪಿ ನಾವೀನ್ಯತೆ ಮತ್ತು ತಂತ್ರಜ್ಞಾನ ಕಾರ್ಯಕ್ರಮವನ್ನು ಸತತ ಎರಡನೇ ವರ್ಷ ಆಯೋಜಿಸುತ್ತಿದೆ. ೪ ಪರಿವರ್ತನಾತ್ಮಕ ಸಮಸ್ಯೆಗಳಿಗೆ ಉತ್ತರ ಕಂಡು ಹಿಡಿಯಲು ೧೦ ಅಂತಿಮ ತಂಡಗಳು ಸ್ಪರ್ಧಿಸುವುದರೊಂದಿಗೆ, ಹ್ಯಾಕಥಾನ್ ಭಾರತದ ಭವಿಷ್ಯವನ್ನು ರೂಪಿಸುವ ಪ್ರತಿಭೆ, ತಂತ್ರಜ್ಞಾನ ಮತ್ತು ದಿಟ್ಟ ವಿಚಾರಗಳ ಶಕ್ತಿಕೇಂದ್ರವಾಗಲಿದೆ ಎಂದು ಭರವಸೆ ನೀಡುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಗ್ರ್ಯಾಂಡ್ ಫಿನಾಲೆಯಲ್ಲಿ ಭಾಗವಹಿಸುವವರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ಅವರೊಂದಿಗೆ ಸಂವಹನ ನಡೆಸಲಿದ್ದಾರೆ.

<><><*><><<>

ಕಾಶಿ ತಮಿಳು ಸಂಗಮಂ ೪.೦ "ಏಕ್ ಭಾರತ್ ಶ್ರೇಷ್ಠ ಭಾರತ್" ನ ದೃಷ್ಟಿಕೋನವನ್ನು ಸಾಕಾರಗೊಳಿಸುತ್ತದೆ. ನಿನ್ನೆ ವಾರಣಾಸಿಗೆ ಆಗಮಿಸಿದ ತಮಿಳುನಾಡಿನ ನಾಲ್ಕನೇ ಗುಂಪಿನ ತಮಿಳು ಅತಿಥಿಗಳಿಗೆ ಭವ್ಯ ಸ್ವಾಗತ ನೀಡಲಾಯಿತು. ಬರಹಗಾರ ಮತ್ತು ಮಾಧ್ಯಮ ವೃತ್ತಿಪರರ ಗುಂಪು ಬಿಎಚ್‌ಯು ನಲ್ಲಿರುವ ಅಂತರ-ಸಂಸ್ಕೃತಿ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಿ, ಸಂಸ್ಥೆಯು ಪೋಷಿಸುವ ಶ್ರೀಮಂತ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನಗಳೊಂದಿಗೆ ತೊಡಗಿಸಿಕೊಂಡಿತು. ಮತ್ತೊಂದೆಡೆ, ಶಿಕ್ಷಕ ಪ್ರತಿನಿಧಿಗಳನ್ನು ಶ್ರೀ ರಣವೀರ್ ಸಂಸ್ಕೃತ ವಿದ್ಯಾಲಯದ ವಿದ್ಯಾರ್ಥಿಗಳು ಪುರುಷಸೂಕ್ತವನ್ನು ಪಠಿಸುತ್ತಾ ಮಂಗಳಚರಣದೊಂದಿಗೆ ಸ್ವಾಗತಿಸಿದರು.

<><><*><><<>

ಕಳೆದ ಹನ್ನೊಂದು ವರ್ಷಗಳಲ್ಲಿ, ನರೇಂದ್ರ ಮೋದಿ ಸರ್ಕಾರದ ನೀತಿಗಳ ಮೂಲಕ ಸಾಮಾಜಿಕ ನ್ಯಾಯದ ದೃಷ್ಟಿಕೋನ ಸ್ಪಷ್ಟವಾಗಿ ಸಾಕಾರಗೊಳ್ಳುತ್ತಿದೆ ಎಂದು ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಹೇಳಿದ್ದಾರೆ. ಇಂದು ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮುದ್ರಾ ಯೋಜನೆ, ನಾಗರಿಕರ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿದೆ. ಇದರ ಪರಿಣಾಮವಾಗಿ, ದೇಶದಲ್ಲಿ ೨೫ ಕೋಟಿ ಜನರು ಬಡತನ ರೇಖೆಯಿಂದ ಹೊರಬಂದಿದ್ದಾರೆ ಎಂದರು.

<>><><*><><<>

ಭಾರತ, ಸತತ ಮೂರನೇ ಬಾರಿಗೆ ಸ್ಕ್ವ್ಯಾಷ್ ವಿಶ್ವಕಪ್ ಅನ್ನು ಆಯೋಜಿಸುತ್ತಿದೆ. ನಾಳೆಯಿಂದ ಈ ತಿಂಗಳ ೧೪ ರವರೆಗೆ ಚೆನ್ನೈನ ಎಸ್‌ಡಿಎಟಿ ಕ್ರೀಡಾಂಗಣದಲ್ಲಿ ಈ ಪಂದ್ಯಾವಳಿ ನಡೆಯಲಿದೆ. ಆತಿಥೇಯ ಭಾರತ, ಹಾಲಿ ಚಾಂಪಿಯನ್ ಈಜಿಪ್ಟ್ ಮತ್ತು ೨೦೨೩ ರ ರನ್ನರ್ ಅಪ್ ಮಲೇಷ್ಯಾ ಸೇರಿದಂತೆ ಹನ್ನೆರಡು ರಾಷ್ಟ್ರಗಳು ಸ್ಪರ್ಧಿಸಲಿವೆ. ಪ್ರತಿ ತಂಡದಲ್ಲಿ ಇಬ್ಬರು ಪುರುಷರು ಮತ್ತು ಇಬ್ಬರು ಮಹಿಳೆಯರು ಇರಲಿದ್ದು, ಪಂದ್ಯಗಳು ೨೦೨೩ರ ಪಂದ್ಯಗಳಲ್ಲಿ ಪರಿಚಯಿಸಲಾದ ಸ್ವರೂಪವನ್ನು ಅನುಸರಿಸುತ್ತದೆ. ಭಾರತ ಅನುಭವ ಮತ್ತು ಯುವ ಪ್ರತಿಭೆಗಳ ಮಿಶ್ರಣವಿರುವ ತಂಡವನ್ನು ಘೋಷಿಸಿದೆ. ಪುರುಷರ ವಿಭಾಗದಲ್ಲಿ ಅಗ್ರ ಶ್ರೇಯಾಂಕಿತ ಅಭಯ್‌ಸಿಂಗ್, ವೆಲವನ್ ಸೆಂತಿಲ್ ಕುಮಾರ್ ಅವರೊಂದಿಗೆ ಸ್ಪರ್ಧಿಸುತ್ತಿದ್ದು, ಮಾಜಿ ವಿಶ್ವ ೧೦ನೇ ಶ್ರೇಯಾಂಕಿತರಾದ ಜೋಷ್ನಾ ಚಿನ್ನಪ್ಪ ೨೦೨೩ಕ್ಕಿಂತ ಉತ್ತಮ ಪ್ರದರ್ಶನ ನೀಡುವ ಹಂಬಲದಲ್ಲಿದ್ದಾರೆ. ಮಹಿಳಾ ವಿಭಾಗದಲ್ಲಿ ಅಗ್ರ ಶ್ರೇಯಾಂಕಿತರಾದ ಅನಹತ್‌ಸಿಂಗ್ ವಿಶ್ವಕಪ್‌ಗೆ ಪಾದಾರ್ಪಣೆ ಮಾಡುತ್ತಿದ್ದಾರೆ. ೨೦೨೩ರಲ್ಲಿ ಈಜಿಪ್ಟ್ ತಂಡ, ಮಲೇಷಿಯಾ ತಂಡವನ್ನು ಸೋಲಿಸಿ ಪ್ರಶಸ್ತಿ ಜಯಿಸಿತ್ತು. ಆ ವೇಳೆ ಭಾರತ ಮೂರನೇ ಸ್ಥಾನ ಪಡೆದಿತ್ತು.

<>><><*><><<>

ಹಿರಿಯ ನಟ ಕಲ್ಯಾಣ್ ಚಟ್ಟೋಪಾಧ್ಯಾಯ ನಿನ್ನೆ ನಿಧನರಾಗಿದ್ದು, ಅವರಿಗೆ ೮೨ ವಯಸ್ಸಾಗಿತ್ತು. ಅವರು ವಯೋಸಹಜ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿತ್ತು. ಅವರು ಸತ್ಯಜಿತ್ ರೇ ಅವರ "ಪ್ರತಿದ್ವಂದಿ" ಸೆರಿದಂತೆ ೪೦೦ಕ್ಕೂ ಹೆಚ್ಚು ಚಲನಚಿತ್ರಗಳು, ಹಲವಾರು ಟಿವಿ ಧಾರಾವಾಹಿಗಳಲ್ಲಿ ನಟಿಸಿದ್ದಾರೆ.

**<>><>< ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೨೦ ಕ್ಕೆ ><><<>**